# ಕಿರುತೆರೆಯ ಕ್ರಾಂತಿಕಾರಿ

ಕನ್ನಡ ಕಿರುತೆರೆಯ ಬಹುತೇಕ ನಿರೂಪಕರು ಕ್ರಾಂತಿಕಾರಿಗಳ ಪೋಷಾಕು ತೊಟ್ಟಿರುವ ಸಂದರ್ಭದಲ್ಲಿ, ಅವರಿಂದ ಸ್ಫೂರ್ತಿ ಪಡೆದಿರುವಂತೆ ಕಾಣಿಸುವ 'ಸಿಪಾಯಿ' ಹೆಸರಿನ ಸಿನಿಮಾ ತೆರೆಕಾಣುತ್ತಿದೆ (ಸೆ. 23).

'ಸಿಪಾಯಿ' ರಜತ್‌ಮಯಿ ನಿರ್ದೇಶನದ ಸಿನಿಮಾ. ಸಿಪಾಯಿ ಎಂದಮಾತ್ರಕ್ಕೆ ಗಡಿಯಲ್ಲಿ ಅಥವಾ ರಣರಂಗದಲ್ಲಿ ಹೋರಾಡುವ ಸಾಹಸಿ ಎಂದೇನೂ ಭಾವಿಸಬೇಕಿಲ್ಲ. ಸಿಪಾಯಿ ನಮ್ಮ ನಡುವೆ ಇರುವ ಸಾಮಾನ್ಯವ್ಯಕ್ತಿಯೂ ಆಗಿರಬಹುದು ಎಂದು ನಂಬಿರುವ ನಿರ್ದೇಶಕರು, ತಮ್ಮ ಕಲ್ಪನೆಯ ಯೋಧನನ್ನು ಟೀವಿ ಪತ್ರಕರ್ತನ ರೂಪದಲ್ಲಿ ಕಂಡಿದ್ದಾರೆ. ಸಮಾಜ ಸುಧಾರಣೆಗೆ ತುಡಿಯುವ ಪತ್ರಕರ್ತನ ಕಥೆಯೊಂದಿಗೆ, ಮಾದಕವಸ್ತುಗಳ ವಿರುದ್ಧದ ಹೋರಾಟವೂ ಭೂಗತಲೋಕದ ಕಥನವೂ ಚಿತ್ರದಲ್ಲಿ ಇದೆಯಂತೆ.

ನಿರ್ಮಾಪಕ ಸಿದ್ಧಾರ್ಥ ಮಹೇಶ್ ಚಿತ್ರದ ನಾಯಕರೂ ಹೌದು. ಇವರ ಜೊತೆಗೆ ಮುಖ್ಯಪಾತ್ರವೊಂದರಲ್ಲಿ ಸಂಚಾರಿ ವಿಜಯ್ ಹಾಗೂ ನಾಯಕಿಯಾಗಿ ಶ್ರುತಿ ಹರಿಹರನ್ ನಟಿಸಿದ್ದಾರೆ. ಅವಕಾಶಗಳಿಲ್ಲದ ದಿನಗಳಲ್ಲಿ ವಿಜಯ್ ಅವರನ್ನು ಹುಡುಕಿಕೊಂಡು ಬಂದ ಪಾತ್ರ 'ಸಿಪಾಯಿ' ಚಿತ್ರದ್ದು. ಈ ಅವಕಾಶದ ನಂತರವೇ ಅವರಿಗೆ 'ನಾನು ಅವನಲ್ಲ, ಅವಳು' ಚಿತ್ರದ ಅವಕಾಶ ದೊರೆಯಿತಂತೆ. ಹಾಗಾಗಿ, 'ಸಿಪಾಯಿ' ಚಿತ್ರದ ಬಗ್ಗೆ ವಿಜಯ್ ಅವರಿಗೆ ಭಾವುಕ ನಂಟಿದೆ.

ಶ್ರುತಿ ಹರಿಹರನ್ ಅವರಿಗೆ ಕೂಡ 'ಸಿಪಾಯಿ' ವಿಶೇಷ ಚಿತ್ರವೆನ್ನಿಸಿದೆ. 'ಲೂಸಿಯಾ' ಚಿತ್ರದ ಸಂದರ್ಭದಲ್ಲಿ ಚಿತ್ರತಂಡದಲ್ಲಿದ್ದ ರಜತ್‌ಮಯಿ ಅವರು, ಆಡಿಷನ್ ಕೊಟ್ಟಿದ್ದ ಶ್ರುತಿ ಅವರನ್ನು ಮೊದಲಿಗೆ ನಿರಾಕರಿಸಿದ್ದರಂತೆ. ತಮ್ಮನ್ನು ನಿರಾಕರಿಸಿದ ವ್ಯಕ್ತಿಯೇ ಈಗ ತಮ್ಮ ನಿರ್ದೇಶನದ ಚಿತ್ರಕ್ಕೆ ನಾಯಕಿಯಾಗಿ ಕರೆದಿರುವುದು ಶ್ರುತಿ ಅವರಿಗೆ ಖುಷಿಕೊಟ್ಟಿದೆ.



# ದೊಡ್ಮನೆಯ ದೊಡ್ಡವರು

ಶಾಲಾಕಾಲೇಜುಗಳಿಗೆ ದಸರೆಯ ರಜೆ ಶುರುವಾಗುವ ಹೊತ್ತಿಗೆ 'ದೊಡ್ಮನೆ ಹುಡ್ಗ' ಚಿತ್ರಮಂದಿರಗಳಿಗೆ ಬರಲಿದ್ದಾನೆ. ಕಳೆದ ವಾರವಷ್ಟೇ ಸಿನಿಮಾದ ಸೆನ್ಸಾರ್ ಪ್ರಕ್ರಿಯೆ ಮುಗಿಸಿಕೊಂಡಿರುವ ನಿರ್ದೇಶಕ ಸೂರಿ ಮತ್ತು ಬಳಗ, ಸೆ. 30ರಂದು ತಮ್ಮ ಚಿತ್ರವನ್ನು ತೆರೆಗೆ ತರಲು ಸಿದ್ಧತೆ ನಡೆಸಿದೆ. ಅಲ್ಲಿಗೆ ಚಿತ್ರರಸಿಕರ ಪಾಲಿಗೆ ದಸರೆಯ ಸಂಭ್ರಮಕ್ಕೊಂದು ಮುನ್ನುಡಿ ದೊರೆತಂತಾಯಿತು.



'ದೊಡ್ಮನೆ ಹುಡ್ಗ' ಪುನೀತ್ ರಾಜ್‌ಕುಮಾರ್ ಹಾಗೂ ರಾಧಿಕಾ ಪಂಡಿತ್ ಜೋಡಿಯ ಸಿನಿಮಾ. ಪುನೀತ್ ಅವರಿಗೊಂದು ಗೆಲುವು ಅನಿವಾರ್ಯವಾಗಿರುವ ಸಂದರ್ಭದಲ್ಲಿ ಹೊರಬರುತ್ತಿರುವ ಈ ಸಿನಿಮಾ ದುಬಾರಿ ಬಜೆಟ್ ಹಾಗೂ ಪ್ರಚಾರತಂತ್ರದ ಮೂಲಕ ಜನರ ಗಮನಸೆಳೆದಿದೆ. ಗೀತೆಯೊಂದರ ಚಿತ್ರೀಕರಣಕ್ಕೆ ಕೋಟ್ಯಂತರ ರೂಪಾಯಿ ಖರ್ಚು ಮಾಡಿರುವ ಸುದ್ದಿಯೇ ಸಿನಿಮಾದ ಬಗೆಗೊಂದು ಆಕರ್ಷಣೆ ಹುಟ್ಟಿಸುವಂತಿದೆ. ಪುನೀತ್ ಜೊತೆಗೆ ರಾಧಿಕಾ ಅವರಿಗಿದು ಎರಡನೇ ಚಿತ್ರವಾದರೆ, ಸೂರಿ ಅವರಿಗೆ ಮೂರನೇ ಸಿನಿಮಾ. ಈ ಕಾಂಬಿನೇಶನ್‌ಗಳು ಕೂಡ ಕುತೂಹಲಕರವಾಗಿವೆ.

ಪುನೀತರ್‌ರ ಇಪ್ಪತ್ತೈದನೇ ಸಿನಿಮಾ ಎನ್ನುವ ವಿಶೇಷಣದ 'ದೊಡ್ಮನೆ'ಯ ಮತ್ತೊಂದು ಆಕರ್ಷಣೆ ಅಂಬರೀಶ್ ಹಾಗೂ ಸುಮಲತಾ ದಂಪತಿ. ಚಿತ್ರದಲ್ಲೂ ಜೋಡಿಯಾಗಿ ನಟಿಸಿರುವ ಈ ದಂಪತಿ, ಚಿತ್ರದ ಪಾಲಿಗೆ 'ದೊಡ್ಮನೆಯ ದೊಡ್ಡವರು'. ಈ ದೊಡ್ಡವರ ವರ್ಚಸ್ಸು ಹಾಗೂ ಪುನೀತ್‌ರ ಪವರ್ ಎರಡೂ ಸೇರಿಕೊಂಡಿರುವುದು ಅಭಿಮಾನಿಗಳ ಸಂಭ್ರಮವನ್ನು ಹೆಚ್ಚಿಸಿದೆ. ಇದರ ಜೊತೆಗೆ ಭಾರತಿ ವಿಷ್ಣುವರ್ಧನ್ ಅವರು ಕೂಡ ತಾರಾಗಣದಲ್ಲಿ ಇರುವುದು ಸೂರಿ ಚಿತ್ರಕ್ಕೊಂದು ಪ್ರೌಢ ಕಳೆ ತಂದುಕೊಟ್ಟಿದೆ. ಹರಿಕೃಷ್ಣ ಸಂಗೀತ ಹಾಗೂ ಸತ್ಯ ಹೆಗಡೆ ಛಾಯಾಗ್ರಹಣ ಚಿತ್ರಕ್ಕಿದೆ.

■ ರಘು